

ಎಚ್ಚರದಲ್ಲೂ ಕೆಲವು ಕ್ಷಣಗಳ ಕಾಲ ಅದು ಕನಸೆಂದು ನನಗೆ ಅನ್ನಿಸಿರಲಿಲ್ಲ. ಮನೆಯ ಕಿಟಕಿಯಿಂದ ಹೊರಗೆ ವಿಮಾನ ಹತ್ತಿ ಉರಿಯುತ್ತಿದೆಯೆಂಬ ಭ್ರಮೆ ಆವರಿಸಿಕೊಂಡಿತ್ತು. ಹಿಂದೆಂದೂ ಕನಸೊಂದು ನನ್ನನ್ನು ಈ ರೀತಿಯಾಗಿ ಬಾಧಿಸಿರಲಿಲ್ಲ. ಈಗಲೂ ಆ ದೃಶ್ಯಗಳು ನನ್ನ ಕಣ್ಮುಂದೆ ಸ್ಪಷ್ಟವಾಗಿ ಹರಿದಾಡುತ್ತಿರುವಂತೆ...' ಸಿದ್ಧಾರ್ಥ ಕುಮಾರ್ ಮಾತು ನಿಲ್ಲಿಸಿದಾಗ ಇಬ್ಬರ ಜ್ಯೂಸ್ ಗ್ಲಾಸುಗಳು ಖಾಲಿಯಾಗಿದ್ದವು.

'ಓ ಮೈ ಗಾಡ್, ವ್ಹಾಟ್ ಎ ಟ್ರ್ಯಾಜಿಕ್ ಡ್ರೀಮ್' ಎಂದು ಸ್ಮಿತಾ ಶರ್ವಾಣಿ ಮೂಗಿನ ಮೇಲೆ ಬೆರಳಿಟ್ಟುಕೊಂಡು ಬೆರಗಾದವಳು 'ಇದುವರೆಗೂ ಜಗತ್ತಿನಲ್ಲಿ ಪರ್ಫೆಕ್ಟಾಗಿ ಡ್ರೀಮ್ ಇಂಟರ್‌ಪ್ರಿಟೇಶನ್ ಮಾಡಲು ಯಾರಿಂದಲೂ ಸಾಧ್ಯವೇ ಆಗಿಲ್ಲವೆಂಬ ಸತ್ಯ ಸಾಬೀತುಗೊಂಡಿದೆ. ಅಂಡ್ ಇಟ್ಸ್ ಪ್ರೂವ್ಡ್ ದಟ್ ಡ್ರೀಮ್ಸ್ ಆರ್ ನಾಟ್ ಅಟ್ ಆಲ್ harmful. ಮತ್ತು ಅವು ಭವಿಷ್ಯ ಸೂಚಕವೂ ಅಲ್ಲವೆಂಬುದು ಕೂಡಾ ವೈಜ್ಞಾನಿಕವಾಗಿ ಪ್ರಕಟಗೊಂಡ ಸಂಗತಿಯೇ ಆಗಿದೆ. ಎನಿವೇಸ್ ನೀವು ಕನಸಿನಲ್ಲಿ ಅಪಘಾತದಿಂದ ಹೊರಗೇ ಉಳಿದಿರುವುದರಿಂದ ನೀವು ಕನಸನ್ನು ಕುರಿತು ಯೋಚಿಸಬೇಕಾಗಿಯೂ ಇಲ್ಲ, ಹೆದರಬೇಕಾಗಿಯೂ ಇಲ್ಲ' ಎಂದು ಅವಳು ಸಮಾಧಾನದ ವ್ಯಾಖ್ಯಾನವನ್ನೇ ಕೊಟ್ಟಿದ್ದಳು ಅವನು ಅಚ್ಚರಿಪಡುವಂತೆ.

'ಪ್ಲೀಸ್ ಕಮ್, ಲೆಟ್ಸ್ ಹ್ಯಾವ್ ಲಂಚ್' ಎನ್ನುತ್ತಾ ಅವನು ಎದ್ದ. ಅವಳೂ ಎದ್ದಳು. ಚೇಂಬರಿಗೆ ಅಂಟಿಕೊಂಡಂತೆ ಇದ್ದ ಬೋರ್ಡ್ ರೂಮನ್ನು ಪ್ರವೇಶಿಸಿದ್ದರು. ಅರವತ್ತು ಜನರು ಕೂರುವಂತಹ ಸುಸಜ್ಜಿತ ಮೀಟಿಂಗ್ ರೂಂ ಅದು. ರೂಮಿನ ಗೋಡೆಗಳಲ್ಲಿ ಸಾಲಾಗಿ ಡಿಸೈನ್ ಮಾಡಿದ ಕಂಪನಿ ಸರಕುಗಳ ಚಿತ್ರಗಳು ಮತ್ತು ಹೆಸರುಗಳು ರಾರಾಜಿಸುತ್ತಿದ್ದವು. 'ನಾವು ಪ್ರಮುಖವಾಗಿ ವೈದ್ಯಕೀಯ ಸರಕು ಮತ್ತು ಉಪಕರಣಗಳ ಉತ್ಪಾದಕರು ಮತ್ತು ರಫ್ತುದಾರರು. ಅದರಲ್ಲೂ ಅತಿಮುಖ್ಯವಾಗಿ ಡಯಾಬಿಟೀಸ್, ಕಾರ್ಡಿಯಾಕ್, ಕ್ಯಾನ್ಸರ್, ಬಿ.ಪಿ, ಲಿವರ್, ಮೆಂಟಲ್ ಡಿಸಾರ್ಡರ್ಸ್, ನ್ಯೂರೋಲಜಿ ಇವುಗಳಿಗೆ ಸಂಬಂಧಿಸಿದ ಔಷಧಿ ಮತ್ತು ಅವುಗಳ ಸರ್ಜಿಕಲ್ ಎಕ್ವಿಪ್ಮೆಂಟ್ಸ್ ಟ್ರೇಡ್‌ನಲ್ಲಿ ನಮ್ಮ ಕಂಪನಿ ನಂಬರ್ ಒನ್ ಎನಿಸಿದೆ. ಅದಿರಲಿ, ನೀವು ಊಟಕ್ಕೆ ಏನು ತಗೊಂತೀರಾ? ವೆಜ್ ಆರ್ ನಾನ್ ವೆಜ್' ಸಿದ್ಧಾರ್ಥ